ಗುರುವಿನ ಕರುಣೆಯಿಂದ ಘನತತ್ತ್ವದಿರವೇ ತಾವಾಗಿ ನಿತ್ಯಸುಖಿಯಾದ ನಿಜಗುಣರಿಗೆ ಪರಮಾತ್ಮನ ಜಗತ್ತೆಲ್ಲವೂ ಝುಗಝುಗಿಸಿ ಬೆಳಗುವ ಪರಂಜ್ಯೋತಿಸ್ವರೂಪದ್ದಾಗಿದೆ. ಪ್ರಭುದೇವರು ಹೇಳುವ ಬಚ್ಚಬರಿಯ ಬೆಳಗಿನ ಅನುಭವವೇ ಇವರ ಕೊನೆಯ ನಿಲವಿನ ಹಂತ. ಈ ಗ್ರಂಥದ ಕೊನೆಯ ಹಾಡಿನಲ್ಲಿ ತಾವು ಕಂಡು ಉಂಡು ಅನುಭವಿಸಿ ಕೊನೆಗೆ ತಾವೇ ಶಂಭುಲಿಂಗವೆಂಬ ಜ್ಯೋತಿಸ್ವರೂಪರಾಗಿ ನಿಂದ ನಿಲುವನ್ನು ವಿವರಿಸಿದ್ದಾರೆ. ಇಂಪಾದ ರಾಗದೊಂದಿಗೆ ಮನದಾಳಕ್ಕಿಳಿಯುವ ಮಂಗಳಾರತಿಯಾದ ಈ ಗೀತೆಯಲ್ಲಿ ಕೇಳುವವರ ಹೃದಯವನ್ನು ಜ್ಯೋತಿಯಾಗಿ ಪರಿವರ್ತಿಸುವಂತಹ ಶಕ್ತಿ ಇದೆ.

**ಜ್ಯೋತಿ ಬೆಳಗುತಿದೆ ವಿಮಲ ಪರಂಜ್ಯೋತಿ ಬೆಳಗುತಿದೆ**
**ಮಾತು ಮನಂಗಳಿಂದತ್ತತ್ತ ಮೀರಿದ**
**ಸಾತಿಶಯದ ನಿರುಪಾಧಿಕ ನಿರ್ಮಲ ಜ್ಯೋತಿ ಬೆಳಗುತಿದೆ ॥ಪ॥**

ಮಾತು ಮನಗಳನ್ನು ಮೀರಿ ಅವುಗಳಿಂದ ಆಚೆ ಬೆಳಗುವ ನಿರ್ಮಲವಾದ ಜ್ಯೋತಿಯ ಇರವು ಹೇಗಿದೆ ಎಂಬುದನ್ನು ತಿಳಿಸುತ್ತಾ, ಮುಂದೆ ಆ ಬೆಳಗಿನಿಂದ ಸಾಧಕನ ಮೇಲೆ ಉಂಟಾಗುವ ಪರಿಣಾಮವನ್ನು ಸ್ಪಷ್ಟಪಡಿಸುತ್ತಾರೆ. ಕೊನೆಯ ನುಡಿಯಲ್ಲಿ ಸ್ವಯಂ ಶಂಭುಲಿಂಗನನ್ನೇ ಪರಂಜ್ಯೋತಿಯ ಪ್ರಕಾಶದ ರೂಪವಾಗಿ ಕಂಡಿದ್ದಾರೆ.

ಜ್ಯೋತಿ ಬೆಳಗುತ್ತಲೇ ಇದೆ, ಶಿವಯೋಗಿಯ ಹೃದಯದಲ್ಲಿ. ನಿತ್ಯನಿರ್ಮಲವಾಗಿ ಸದಾ ಬೆಳಗುವ 'ಓಂಕಾರ' ರೂಪದ ಜ್ಯೋತಿಯು ಸತ್ವ ರಜಸ್ಸು ತಮಸ್ಸೆಂಬ ಮೂರು ಗುಣಗಳನ್ನು ಮೀರಿ ನಿಂತಿದೆ. ಮತ್ತು ಎಣಿಕೆಗೆ ನಿಲುಕದಂತಹ ಭಾವಾತೀತವಾದ ಅರ್ಥವನ್ನು ಅಂತರಂಗದಲ್ಲೇ ಪ್ರಕಾಶಿಸಿ ತೋರುತ್ತಿದೆ. ನಿರಂತರವಾಗಿ ಚಲಿಸುತ್ತಿರುವ ಈ ಜಗತ್ತಿನಲ್ಲಿ ಅಣುಮಾತ್ರವೂ ಚಲನೆಯಿಲ್ಲದ ನಿಶ್ಚಲ ಬೆಳಗು ತಾನೇ ತಾನಾಗಿ ಕಂಗೊಳಿಸುತ್ತಿದೆ. ಮೋಕ್ಷಚಿಂತಾಮಣಿ ಎನಿಸುವ ಈ ಚಿತ್‌ಜ್ಯೋತಿಯು ಬೇರೆ ಏನೂ ಆಗಿರದೆ ಪ್ರತ್ಯಕ್ಷ ಶಂಭುಲಿಂಗವೇ ತಾನಾಗಿದೆ ಎಂಬ ಮಾತನ್ನು ಕೊನೆಯಲ್ಲಿ ನಿಜಗುಣರು ಹೇಳಿದ್ದಾರೆ.

ನಿಜಗುಣರ 'ಕೈವಲ್ಯಪದ್ಧತಿ'ಯನ್ನು ಸ್ಥೂಲವಾಗಿ ನೋಡಿದ್ದೇವೆ. ಹಿಂದೆ ತಿಳಿಸಿದಂತೆ ಇದರೊಡನೆ ಇನ್ನೂ ಐದು ಗ್ರಂಥಗಳು ಸೇರಿ ಷಟ್‌ಶಾಸ್ತ್ರವನ್ನು ರಚಿಸಿರುವ ನಿಜಗುಣ ಶಿವಯೋಗಿಗಳು ಜಿಜ್ಞಾಸುಗಳಿಗೆ, ಮುಮುಕ್ಷುಗಳಿಗೆ ದಾರಿದೀಪದಂತೆ ಬೆಳಗಿ, ಶಂಭುಲಿಂಗನೊಳಗೆ ಒಂದಾಗಿ ಪರಮುಕ್ತರಾಗಿದ್ದಾರೆ. ಅವರ ಸ್ಮರಣೆಯೇ ನಮ್ಮೆಲ್ಲರ ಸೌಭಾಗ್ಯ.

---

## ದೇಹಿ ತವ ಪದೇ ಗತಿಂ



ತುಂಬಿ ತುಂಬಿ ಬಂದ ಹೊಳೆಗ–
ಳೆಲ್ಲ ಒಂದುಗೂಡಿ ಕಡಲ
ತಡಿಯ ಸೇರಿ ಮೊರೆಯುವಂತೆ
"ದೇಹಿ ತವ ಪದೇ ಗತಿಂ
ದೇಹಿ ತವ ಪದೇ ಗತಿಂ..."

ಇಂದು ನಮ್ಮ ಹೃದಯದಿಂದ
ಭಾವಪೂರ ತುಂಬಿ ಬಂದು
ಮೊರೆವುದೊಂದೇ ಕೊರಳಿನಿಂದ
"ದೇಹಿ ತವ ಪದೇ ಗತಿಂ
ದೇಹಿ ತವ ಪದೇ ಗತಿಂ..."

ಹಿಮದ ಗಿರಿಯ ಧವಳಶೃಂಗ–
ದಿಂದ ಧುಮುಕಿ ಬಂದ ಗಂಗೆ
ತುಂಬಿ ಸೂಸಿ ಹರಿದ ನೆಲದಿ
ಹಾಲು ಜೇನು ಉಕ್ಕಿತು
ಚರಾಚರವು ನಕ್ಕಿತು...
ರಾಮಕೃಷ್ಣ ಹೃದಯದಿಂದ
ಹರಿದುಬಂದ ಜ್ಞಾನಗಂಗೆ
ನಿಮ್ಮ ಹೃದಯ ತುಂಬಿ ಸೂಸೆ
ರಾಷ್ಟ್ರಹೃದಯ ಉಕ್ಕಿತು
ಜೀವಜಾತ ನಕ್ಕಿತು...

ಮೇಘದೊಡಲಿನಿಂದ ಸಿಡಿದ
ಸಿಡಿಲು ಮೊಳಗಿ ಹೊಡೆಯುತಿರಲು
ಕಾಡಿನೊಡಲಿನಲ್ಲಿ ಸುಪ್ತ
ಸಿಂಹ ನೆಗೆದು ನೋಡಿತು
ಶಿರವ ಕೊಡವಿ ಗುಡುಗಿತು...
ನೀಲ ಬಾನಿನಗಲದೆದೆಯ
ಗುರುವಿನಂತರಂಗ ಕರೆಯ
ಕೇಳಿ ನಿಮ್ಮ ಜೀವಸಿಂಹ
ದಿಗ್‌ದಿಗಂತ ನೋಡಿತು
ಕೆರಳಿ ನಿಂತು ಗುಡುಗಿತು..

ಕ್ಷಿತಿಯ ಕುಂಕುಮಾಂಕದಂತೆ
ಮೂಡಲಲ್ಲಿ ಮೂಡಿಬಂದ
ಬಾಳರವಿಯ ಬಿಂಬದಿಂದ
ಸೂರ್ಯಕಾಂತಿಯರಳಿತು
ಬಿಂಬದತ್ತ ಹೊರಳಿತು..
ರಾಗರಂಗದಾಚೆಗಿರುವ
ಮನದ ಮೇರು ಗಿರಿಯನೇರಿ
ಬಂದ ಭೂಮಬಿಂಬದಿಂದ
ನಿಮ್ಮ ಸುಮನವರಳಿತು
ಭೂಮದತ್ತ ಹೊರಳಿತು....

ಗರುಡ ರೆಕ್ಕೆ ಬೀಸಿ ಹಾರಿ
ಭೂಮಿ ಬಿಟ್ಟು ಬಾನಿಗೇರಿ
ಚಿಕ್ಕೆ ನಾಡಿನಾಚೆ ಸೇರಿ
ಹರಿಯ ಹೊತ್ತು ತಂದನು
ಭೂಮಿಗಳಿದು ಬಂದನು
ಭೋ ನರೇಂದ್ರ, ತವ ಸುಧೀಂದ್ರ
ಶ್ರೀ ವಿವೇಕಗಿರಿಯನೇರಿ
ಪರಮಹಂಸ ಪದವ ಸಾರಿ
ಪರಾನಂದವಾಂತನು
ಧರಣಿಗದನೆ ತಂದನು...

ಲಂಕೆ ಸುಡುವ ಬೆಂಕಿಯಲ್ಲಿ
ಸುಡದ ತಾಯಿ ಸೀತೆಗೆರಗಿ
ರಾಮ ಬರುವ ತಾಳಿರೆಂದು
ಸಾರುತಿದ್ದ ಮೂರುತಿ!
ರಾಘವೇಂದ್ರ ಕೀರುತಿ!
ಶರಧಿಯಾಚೆ ಪಡುವಲಲ್ಲಿ
ರಾಮಕೃಷ್ಣ ಜ್ಯೋತಿ ಹಚ್ಚಿ
ಜಗದ ಹೃದಯ ಕಂಡ ನಿಮ್ಮ
ಮಂತ್ರವಾಯ್ತು. 'ಜಾಗೃತೀ'
ಅರಿತಳದನು ಭಾರತೀ...

– ಜಿ.ಆರ್. ಕುಲಕರ್ಣಿ

# ಭಗವಂತನನ್ನು ಸ್ಪರ್ಶಿಸಿದ ಸೋದರಿ ಲಲಿತಾ

ಪ್ರವ್ರಾಜಿಕಾ ಬ್ರಹ್ಮಪ್ರಾಣಾ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)



**ಸಚ್ಚಿದಾನಂದ ಸಾಗರದ ಸವಿ:** ಸೋದರಿ ಲಲಿತಾರ ಜೀವನದಲ್ಲಿ ಶಕ್ತಿ ಮತ್ತು ವಿನಯ ಜೊತೆಜೊತೆಯಾಗಿರುವುದನ್ನು ಗಮನಿಸುವುದು ಅತ್ಯಂತ ಸ್ವಾರಸ್ಯಕರವಾದ ವಿಷಯ. ಸ್ವಾಮೀಜಿಯವರಿಂದ ಸೋದರಿ ಕೇಳಿದ ಮೊದಲ ಶಬ್ದಗಳೇ ಶಕ್ತಿಯ ಕುರಿತಾಗಿತ್ತೆನ್ನುವುದು ಆಸಕ್ತಿಯ ಸಂಗತಿ. ೧೮೯೯, ಡಿಸೆಂಬರ್ ೮ ರಂದು ಆ ಮೂವರು ಮೀಡ್ ಸೋದರಿಯರು ಸ್ವಾಮೀಜಿಯವರ ವಿಶ್ವವಿಖ್ಯಾತವಾದ, ಲಾಸ್ ಏಂಜಲೀಸ್‌ನ ಮೊದಲ ಉಪನ್ಯಾಸವನ್ನು ಅಲ್ಲಿನ ಬ್ಲಾಚರ್ಡ್ ಹಾಲ್‌ನಲ್ಲಿ ಕೇಳಿದರು. ಸ್ವಾಮೀಜಿ ತಮ್ಮ ಪ್ರವಚನದ ಮಧ್ಯೆ ಹೀಗೆ ಹೇಳುತ್ತಾರೆ: "ಭಗವಂತನನ್ನು ಬಾಹ್ಯ ಇಂದ್ರಿಯಗಳಿಂದ ಅರಿಯಲಾಗದು. ಅನಂತವನ್ನು, ಅಖಂಡವನ್ನು ಹಾಗೆ ಗ್ರಹಿಸಲಾಗದು. ಅದು ನಮ್ಮಿಂದ ಮರೆಯಾಗಿದ್ದರೂ ಅದಿಲ್ಲ ಎಂದು ತೀರ್ಮಾನಿಸಲಾಗದು. ಏಕೆಂದರೆ ಅದು ಇದ್ದೇ ಇರುತ್ತದೆ." ಬಳಿಕ ಸ್ವಾಮೀಜಿ ಒಬ್ಬ ಜ್ಞಾನಮಾರ್ಗಿಯಂತೆ ಭಗವಂತ ಏನು, ಹೇಗೆ, ಎಲ್ಲಿದ್ದಾನೆ ಎಂಬುದನ್ನು ನಿಶ್ಚಿತವಾಗಿ ಹೀಗೆ ಹೇಳಹೊರಟರು: "ಯಾವುದನ್ನು ನಾವು ಹೊರಗಡೆಯ ಕಣ್ಣುಗಳಿಂದ ನೋಡಲಾಗದು? ಕಣ್ಣನ್ನೇ ಅಲ್ಲವೇ. ಅದು ಉಳಿದೆಲ್ಲ ವಸ್ತುಗಳನ್ನು ಸೆರೆಹಿಡಿಯಬಲ್ಲುದು. ಆದರೆ ತನ್ನನ್ನು ತಾನು ನೋಡಲಾರದು. ಹಾಗೆಯೇ ಭಗವಂತನನ್ನು ಹೊರಗಿನ ಇಂದ್ರಿಯಗಳಿಂದ ಅರಿಯಲಾಗದು. ನಿಮ್ಮ ಕಣ್ಣುಗಳನ್ನು ಒಳಮುಖವಾಗಿ ತಿರುಗಿಸಿ, ಆತ್ಮಕ್ಕೂ ಆತ್ಮನಾದ ಇದನ್ನು ನಿಮ್ಮೊಳಗೆ ಕಾಣಿರಿ. 'ನಾನೇ ಅಖಂಡ ಚೈತನ್ಯ' ವೆಂದು ಅರಿತಾಗ ಮತ್ತೆ ನಿಮಗೆ ಮರಣವಿಲ್ಲ, ಜೀವನವಿಲ್ಲ, ನೋವು–ನಲಿವುಗಳಿಲ್ಲ, ಜಾತಿ–ಪಂಥಗಳಿಲ್ಲ, ಲಿಂಗಭೇದವಿಲ್ಲ." ಉಪನ್ಯಾಸದ ಅಂತ್ಯದಲ್ಲಿ ಸ್ವಾಮೀಜಿ ತಮ್ಮ ಅದ್ಭುತವಾದ ಧ್ವನಿಯಲ್ಲಿ, **'ಚಿದಾನಂದರೂಪಃ ಶಿವೋऽಹಂ ಶಿವೋऽಹಂ'** ಎಂದು ಪಠಿಸಿದರು.

ಆ ಸತ್–ಚಿತ್–ಆನಂದ ಸಾಗರವನ್ನು ಸೋದರಿ ಲಲಿತಾ, ಸ್ವಾಮೀಜಿಯವರನ್ನು ತಮ್ಮ ಮನೆಯ ಮೆಟ್ಟಿಲುಗಳ ಮೇಲೆ ಸ್ಪರ್ಶಿಸಿದಾಗ ಕಂಡಿದ್ದರು. ಆ ಸಂದರ್ಭದಲ್ಲಿ ಅವರು ಭಗವಂತನನ್ನೇ ಸ್ಪರ್ಶಿಸಿದ್ದರು. ವಿಶಾಲಪ್ರಜ್ಞೆಯ ಸಾಗರ ಅವರ ಅಂತರಾಳದಲ್ಲಿ ಹೇಗೆ ಉಕ್ಕಿ ಬಂದಿತ್ತೆಂದರೆ, ಅವರು ಆಗಾಗ ಬಾಹ್ಯಪ್ರಜ್ಞೆಯನ್ನು ಕಳೆದುಕೊಳ್ಳುತ್ತಿದ್ದರು. ಆ ಅನುಭವವು ಜೀವನದ ಮುಂದಿನೆಲ್ಲ ಘಟನೆಗಳನ್ನು ಅಳೆಯುವ ರೀತಿಯನ್ನೂ, ಸಮದರ್ಶಿತ್ವವನ್ನೂ ಮತ್ತು ಆಧ್ಯಾತ್ಮಿಕಶಕ್ತಿಯನ್ನೂ ಪಡೆದುಕೊಳ್ಳಲು ಲಲಿತಾ ಸಮರ್ಥರಾದರು. ಇಲ್ಲದಿದ್ದರೆ, ಒಂದು ಕೋಣೆಯೊಳಗೆ ತಾವು ಪ್ರವೇಶಿಸುವುದನ್ನು ಬಿಟ್ಟು ತಮಗಿಂತ ಕಿರಿಯರಿಗೆ ಮೊದಲು ಒಳಹೋಗಲು ಬಿಡುವುದು ಅದಾವ ಶಕ್ತಿಯೆಂದುಕೊಂಡಿರಿ? ಸೋದರಿ ಲಲಿತಾರವರಿಗೆ ಗೊತ್ತಿತ್ತು, ತಮ್ಮೊಳಗೆ ಅಭಿವ್ಯಕ್ತವಾದ ಆ ಪ್ರಜ್ಞೆಯ ಸಾಗರವು ಪ್ರತಿಯೊಬ್ಬರ ಒಳಗೂ ಇದೆಯೆಂದು. ಆ ಬಗೆಯಲ್ಲೇ ಅವರ ನಡವಳಿಕೆಗಳು ಇರುತ್ತಿದ್ದವು.

ಸ್ವಾಮೀಜಿಯವರ ಸಂಪರ್ಕದಲ್ಲಿ ಆದ ಆ ಅನುಭವವು ಸೋದರಿ ಲಲಿತಾ ಅವರಿಗೆ ಪರಮಾದ್ಭುತ ಕಾರ್ಯಶೀಲ ಶಕ್ತಿಯನ್ನು ನೀಡಿತು. ಆದರೆ, ಅವರು ಪರಿಪೂರ್ಣತೆಯ ಸೋಗಿನಲ್ಲಿ ತಮ್ಮನ್ನು ಬಚ್ಚಿಟ್ಟುಕೊಳ್ಳಲಿಲ್ಲ. ತಮ್ಮ ನ್ಯೂನತೆಗಳನ್ನು ಕುರಿತಂತೆ ವಿನೋದದಿಂದ, "ಸರಿ, ನಾನು ಮತ್ತೆ ಅದನ್ನು ಮಾಡಬಾರದು" ಎಂದು ಸಹಜವಾಗಿ ಒಪ್ಪಿಕೊಂಡು ಮುಂದುವರಿಯುವುದು ಅವರಿಗೆ ಕಷ್ಟವಾಗಿರಲಿಲ್ಲ. ವೈರಾಗ್ಯದ ಪ್ರತೀಕವಾದ ಈ ಹಾಸ್ಯಪ್ರಜ್ಞೆಯೇ ಅವರನ್ನು ಶಾಂತಿದೂತರನ್ನಾಗಿಸಿತ್ತು. ವೇದಾಂತ ಕೇಂದ್ರದ ನಿವಾಸಿಗಳ ನಡುವೆ ಯಾವುದೇ ವಿಷಯದ ಬಗ್ಗೆ ಉದ್ವಿಗ್ನತೆ, ಭಿನ್ನಾಭಿಪ್ರಾಯ ತಲೆದೋರಿದಾಗ ಅವರು, "ಸ್ವಲ್ಪ ಆರಾಮವಾಗಿರಿ", "ಅವಸರ ಬೇಡ. ಗಡಿಬಿಡಿ ಬೇಡ. ಐದು ನಿಮಿಷ ಆಚೀಚೆಯಾದರೆ ಏನೂ ವ್ಯತ್ಯಾಸವಾಗುವುದಿಲ್ಲ" ಎಂದು ಹೇಳುತ್ತಿದ್ದರು. ಅವರ ಮಾತುಗಳನ್ನು ಎಲ್ಲರೂ ಶ್ರದ್ಧೆಯಿಂದ ಕೇಳುತ್ತಿದ್ದರು. ಪ್ರವ್ರಾಜಿಕಾ ವರದಪ್ರಾಣಾ ಹೀಗೆ ಬರೆಯುತ್ತಾರೆ: "ಲಲಿತಾ ಎಲ್ಲ ಸಂದರ್ಭಗಳಲ್ಲಿಯೂ ಪ್ರಸನ್ನವಾಗಿರುತ್ತಿದ್ದರು ಮತ್ತು ಸಂಪೂರ್ಣ ನಿರಹಂಕಾರದಿಂದ ಇರುತ್ತಿದ್ದರು. ಅವರು ಅದೆಷ್ಟು ಮೃದುವಾಗಿ ನಡೆಯುತ್ತಿದ್ದರೆಂದರೆ, ಅದರ ಸದ್ದನ್ನು ಕೇಳುವುದೇ ಕಷ್ಟವಾಗಿತ್ತು. ಆದರೆ, ಅವರಲ್ಲಿ ಚಾರಿತ್ರ್ಯಬಲ ಮತ್ತು ದೃಢತೆ ಧಾರಾಳವಾಗಿ ಇದ್ದವು."

ಸೋದರಿ ಲಲಿತಾರನ್ನು ಮಹಿಮಾನ್ವಿತರನ್ನಾಗಿಸಿದ್ದು ಸುಖಕರ ಜೀವನವಲ್ಲ. ಅವರಿಗೆ ದುಃಖ, ನಷ್ಟ ಎಂಬುದು ಚೆನ್ನಾಗಿ ಗೊತ್ತಿತ್ತು. ೧೯೨೫ರಲ್ಲಿ ಅವರ ಒಬ್ಬನೇ ಮಗ ರಾಲ್ಫ್‌ಗೆ, ಒಂದು ಭೂಕುಸಿತದ ಸಮಯದಲ್ಲಿ ಬಹಳ ಪೆಟ್ಟಾಯಿತು. ಅವನು ಮೂರು ದಿನಗಳ ಕಾಲ ನರಳಿದನು. ಮೂರನೆಯ

ರಾತ್ರಿ ಲಲಿತಾರ ಕನಸಿನಲ್ಲಿ ಒಂದು ನೋಟ ಕಂಡುಬಂದಿತು. ಅದರಲ್ಲಿ ಸ್ವಾಮೀಜಿಯವರು ಮೊಣಕಾಲಿನಷ್ಟು ಎತ್ತರದ ಸಮುದ್ರದ ನೀರಿನಿಂದ ದಡದೆಡೆಗೆ ನಡೆಯುತ್ತ, ರಾಲ್ಫ್‌ನನ್ನು ತಮ್ಮ ಬಾಹುಗಳಲ್ಲಿ ಎತ್ತಿಕೊಂಡಿದ್ದರು. ಇದರಿಂದ ಲಲಿತಾ ಅವರ ಜೀವನವೇ ವಿಧ್ವಂಸವಾದಂತಾಯಿತು. ಈ ಆಘಾತದಿಂದ ಅವರ ಆರೋಗ್ಯವು ಹದಗೆಟ್ಟಿತು.

ಅವರು ಈ ಬಗೆಯ ಅಸಹನೀಯ ದುಃಖವನ್ನು ಅನುಭವಿಸಿದುದು ಇದೇ ಮೊದಲ ಬಾರಿ ಏನಾಗಿರಲಿಲ್ಲ. ೧೯೦೦ ರಲ್ಲಿ ಒಂದು ದಿನ ತುಂಬ ನಿರಾಶೆಯಿಂದ ಲಲಿತಾ, ಸ್ವಾಮೀಜಿಯವರು ಪಸಾಡೆನದ ಮನೆಯ ಅಟ್ಟಣಿಗೆಯ ಮೇಲೆ ತಮ್ಮ ನೆನಪಿನ ಕುರುಹಾಗಿ ಬಿಟ್ಟುಹೋದಂತಹ ಹುಕ್ಕಾದ ಕೊಳವೆಯನ್ನು ಎತ್ತಿಕೊಂಡರು. "ನಾನು ಹೋದಲ್ಲೆಲ್ಲ ಯಾವಾಗಲೂ ಏನಾದರೊಂದು ವಸ್ತುವನ್ನು ಬಿಟ್ಟುಹೋಗುತ್ತೇನೆ" ಎಂದು ಸ್ವಾಮೀಜಿ ಹೇಳಿದ್ದರು. ಲಲಿತಾ ಆ ಹುಕ್ಕಾವನ್ನು ಎತ್ತಿಕೊಳ್ಳುತ್ತಲೇ ಅವರಿಗೆ ಸ್ವಾಮೀಜಿಯವರ ಧ್ವನಿ, "ಇದು ಅಷ್ಟು ಕಷ್ಟವೇನು?" ಎಂಬುದು ಕೇಳಿಬಂತು. ಲಲಿತಾ ತಮಗೇ ಅರಿವಿಲ್ಲದೆ ಆ ಕೊಳವೆಯನ್ನು ತಮ್ಮ ಹಣೆಗೆ ಒತ್ತಿಕೊಂಡರು. ಹೀಗೆ ಆಕೆಯ ದುಃಖವು ಸಮಾಧಾನವಾಗಿ ಪರಿವರ್ತನೆಗೊಂಡಿತು. ಈ ಹುಕ್ಕಾ ಈಗ ಹಾಲಿವುಡ್‌ನಲ್ಲಿನ ದಕ್ಷಿಣ ಕ್ಯಾಲಿಫೋರ್ನಿಯಾ ವೇದಾಂತ ಸೊಸೈಟಿಯಲ್ಲಿದೆ.

೧೯೨೪ರಲ್ಲಿ ರಾಲ್ಫ್‌ನ ಮರಣದಿಂದ ಉಂಟಾದ ಸೋದರಿ ಲಲಿತಾರ ಸಂತಾಪವು ಕೊನೆಗೂ ಇನ್ನೊಂದು ರೀತಿಯಲ್ಲಿ ನಿವಾರಣೆಯಾಯಿತು. ಅದಾಗಿ ಮೂರು ವರ್ಷಕ್ಕೆ ೧೯೨೮ ರಲ್ಲಿ ಲಲಿತಾ, ಪೋರ್ಟ್‌ಲ್ಯಾಂಡ್ ವೇದಾಂತ ಸೊಸೈಟಿಯ ಮುಖ್ಯಸ್ಥರಾದ ಸ್ವಾಮಿ ಪ್ರಭವಾನಂದರನ್ನು, ಅವರು ಕ್ಯಾಲಿಫೋರ್ನಿಯಾದಲ್ಲಿ ಉಪನ್ಯಾಸಗಳನ್ನು ನೀಡುತ್ತಿರುವಾಗ, ಭೇಟಿಯಾದರು. ಆ ಯುವಸಂನ್ಯಾಸಿಯ ಕಡೆಗೆ ಅವರ ಮನಸ್ಸು ತಾಯಿಯ ಹಾಗೆ ಆಕರ್ಷಿತವಾಯಿತು. ಸ್ವಾಮಿ ಪ್ರಭವಾನಂದರನ್ನು 'ಗುರು' ಎಂದು ಸೋದರಿ ಗೌರವಿಸಿದರು. ಅವರ ಪೋರ್ಟ್‌ಲ್ಯಾಂಡ್ ವೇದಾಂತ ಕಾರ್ಯದಲ್ಲಿ ಮೊದಲು ನೆರವಾದರು. ಒಂದು ವರ್ಷವಾದ ಮೇಲೆ ಅವರು ಹಾಲಿವುಡ್ ಹಿಲ್ಸ್‌ನಲ್ಲಿರುವ ತಮ್ಮ ಮನೆಯನ್ನು, 'ಲಾಸ್ ಏಂಜಲೀಸ್ ವೇದಾಂತ ಸೊಸೈಟಿ' ಯ ಕೇಂದ್ರವಾಗಿ ಸ್ವೀಕರಿಸುವಂತೆ ಸ್ವಾಮಿಗಳನ್ನು ಕೇಳಿಕೊಂಡರು. ರಾಮಕೃಷ್ಣ ಸಂಘದ ಆಗಿನ ಮಹಾಧ್ಯಕ್ಷರಾದ ಸ್ವಾಮಿ ಶಿವಾನಂದಜಿ ಅವರು, ಸ್ವಾಮಿ ಪ್ರಭವಾನಂದರಿಗೆ "ಲಾಸ್ ಏಂಜಲಿಸ್‌ನಲ್ಲಿ ಕೇಂದ್ರವನ್ನು ತೆರೆಯಲು ನಾನು ಅನುಮತಿ ಕೊಡುತ್ತೇನೆ" ಎಂದು ಪತ್ರ ಬರೆದರು. ೧೯೨೯ ರಲ್ಲಿ ಸ್ವಾಮಿ ಪ್ರಭವಾನಂದರು ಸೋದರಿಯ ಮನೆಯಿದ್ದ, ಗ್ರೀನ್ ಹೌಸ್, ೧೯೪೬, ಇವಾರ್ ಅವೆನ್ಯೂ – ಈ ವಿಳಾಸಕ್ಕೆ ಸ್ಥಳಾಂತರಗೊಂಡರು.

ಸೋದರಿ ಲಲಿತಾರವರು ತಮ್ಮ ೭೦ ರ ಇಳಿ ವಯಸ್ಸಿನಲ್ಲಿಯೂ ಸ್ವತಃ ಅಡುಗೆಯನ್ನು ಮಾಡುವುದು, ತೋಟಗಾರಿಕೆ, ಮನೆ ಸ್ವಚ್ಛ ಮಾಡುವುದು – ಇವೆಲ್ಲವನ್ನೂ ಮಾಡುತ್ತಿದ್ದರು. ಇದಲ್ಲದೆ, ಹೊಸದಾಗಿ ಕಟ್ಟಿಸಿದ ಚಿಕ್ಕ ದೇವರಕೋಣೆಯಲ್ಲಿ ಪಂಚೋಪಚಾರ ಪೂಜೆಯನ್ನೂ ಮಾಡತೊಡಗಿದರು. ಪ್ರಭವಾನಂದರು ಆ ಕೇಂದ್ರದ ನೇತೃತ್ವವನ್ನು ವಹಿಸಿಕೊಂಡರು. ಅಮೆರಿಕದಲ್ಲಿ ಆರ್ಥಿಕ ಕುಸಿತ ಉಂಟಾದಾಗ, ಆಶ್ರಮದ ನಿವಾಸಿಗಳೆಲ್ಲರೂ ಕೇವಲ ಜೋಳದ ಅರಳು ಮತ್ತು ಹಾಲನ್ನು ಸೇವಿಸಿ ಅನೇಕ ದಿನಗಳನ್ನು ಕಳೆದರು.

ತಮ್ಮ ಮನೆಯನ್ನು ವೇದಾಂತ ಸೊಸೈಟಿಗೆ ಬರೆದುಕೊಟ್ಟ ಮೇಲೆ, ಮತ್ತೆ ಅವರು ಎಂದಿಗೂ ಅದರ ಬಗ್ಗೆ ಆಸಕ್ತಿ ತೋರಿಸಲಿಲ್ಲ. ಪ್ರಭವಾನಂದರು ಹೇಳುತ್ತಿದ್ದರು, "ನಾನು ಮತ್ತು ಸೋದರಿ ೩೦ ವರ್ಷಕ್ಕೂ ಹೆಚ್ಚು ಕಾಲ ಒಟ್ಟಿಗೆ ಇದ್ದೆವು. ನಮ್ಮಿಬ್ಬರ ನಡುವೆ ಯಾವ ಕಟುವಾದ ಮಾತುಕತೆಯೂ ನಡೆಯಲಿಲ್ಲ." ಒಂದು ಸಲ ಆಶ್ರಮವಾಸಿಗಳು ಅದರ ಆವರಣದಿಂದ ಹೊರಹೋಗಬೇಕಾದರೆ, ಮೊದಲು ತಮ್ಮ ಅನುಮತಿಯನ್ನು ಕೇಳಬೇಕೆಂಬ ನಿಯಮವನ್ನು ಸ್ವಾಮಿ ಪ್ರಭವಾನಂದರು ಮಾಡಿದರು. ಸೋದರಿ ಲಲಿತಾ ಕೂಡ ಈ ನಿಯಮವನ್ನು ಪಾಲಿಸಿದರು. "ಸೋದರಿ, ನೀವು ನನ್ನ ಅನುಮತಿಯನ್ನು ಕೇಳಬೇಕಾಗಿಲ್ಲ" ಎಂದು ಪ್ರಭವಾನಂದರು ಇದಕ್ಕೆ ವಿರೋಧಿಸಿದರು. ಆದರೆ, ಸೋದರಿಯ ವಿನಯ ಎಷ್ಟಿತ್ತೆಂದರೆ, "ಸ್ವಾಮೀಜಿ, ಇತರರು ಅನುಮತಿಯನ್ನು ಕೇಳಬೇಕಾದರೆ, ನಾನೂ ಅನುಮತಿಯನ್ನು ಕೇಳಲು ಇಷ್ಟಪಡುತ್ತೇನೆ" ಎಂದು ಆಕೆ ಸ್ವಾಮಿಗಳನ್ನು ಒತ್ತಾಯಿಸಿದರು. ಸೋದರಿಯ ಮಹಿಮೆ ಎಂತಹುದೆಂದರೆ ಅವರು ತಮ್ಮನ್ನು ಇತರರಿಗಿಂತ ಹೆಚ್ಚಿನವರೆಂದು ಯಾವತ್ತೂ ಭಾವಿಸಲಿಲ್ಲ.

ಪ್ರಭವಾನಂದಜಿ ಮತ್ತು ಸೋದರಿಯ ನಡುವೆ ಎಂತಹ ಆತ್ಮೀಯ ಸಂಬಂಧವಿತ್ತೆಂದರೆ, ೧೯೩೩ ರಲ್ಲಿ ಅವರು ಭಾರತಕ್ಕೆ ಕೂಡಿಯೇ ಭೇಟಿಯಿತ್ತರು. ಭಾರತದಲ್ಲಿರುವಾಗ ಪ್ರಭವಾನಂದರು ಮತ್ತು ಸೋದರಿ ಶ್ರೀರಾಮಕೃಷ್ಣರ ಇಬ್ಬರು ನೇರಶಿಷ್ಯರಾದ ಸ್ವಾಮಿ ಅಖಂಡಾನಂದರು ಮತ್ತು ಸ್ವಾಮಿ ವಿಜ್ಞಾನಾನಂದರನ್ನು ಭೇಟಿಯಾದರು. 'ಸೋದರಿ ಲಲಿತಾ ಒಂದು ಅದ್ಭುತವಲ್ಲವೆ?" ಎಂದು ಸ್ವಾಮಿ ವಿಜ್ಞಾನಾನಂದರು ಪ್ರಭವಾನಂದರನ್ನು ಕೇಳಿದರು. ಅದಲ್ಲದೆ, ಸ್ವಾಮಿ ವಿಜ್ಞಾನಾನಂದರು, ಪ್ರಭವಾನಂದರು ಮತ್ತು ಸೋದರಿಯೊಡನೆ ಕಾಮಾರಪುಕುರ ಮತ್ತು ಜಯರಾಂಬಾಟಿಗೆ ಜೊತೆಯಾಗಿ ಭೇಟಿಕೊಟ್ಟರು. ಪ್ರಭವಾನಂದರು ನೆನಪಿಸಿಕೊಳ್ಳುತ್ತಾರೆ, "ನಾವು ಒಂದೇ ಕಾರಿನಲ್ಲಿ ಬಹಳ ಗಂಟೆಗಳವರೆಗೆ ಸಂಚರಿಸಿದೆವು. ಆದರೆ ಆಕೆ ಒಂದು ಮಾತನ್ನೂ ಆಡಲಿಲ್ಲ. ಅದೆಷ್ಟು ಶಾಂತ! ಅವರ ಶಾಂತಿ ಅಸಾಧಾರಣವಾಗಿತ್ತು."

ಅದು ಸ್ವಭಾವತಃ ಇದ್ದ ಲಜ್ಜೆಯಿಂದ ಹುಟ್ಟಿದುದಲ್ಲ. ಬದಲಾಗಿ ಅದು ತನ್ನ ಸ್ವರೂಪದಲ್ಲಿ ನೆಲೆನಿಂತುದರ ಫಲಶ್ರುತಿಯಾಗಿ ಬಂದದ್ದು!